# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 32 (106)
ಸದಸ್ಯರ ಹೆಸರು : ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 04.03.2025
ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ರಾಜ್ಯದಲ್ಲಿ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಒಳಪಡದೇ ಇರುವ ಪ್ರದೇಶದಲ್ಲಿ ಮಹಾಯೋಜನೆ ನಿಯಮಗಳ ಕರಡನ್ನು 30.01.2025 ರಂದು ಪ್ರಕಟಿಸಿ ಸಾರ್ವಜನಿಕ ಆಕ್ಷೇಪಣೆಗಳನ್ನು ಆಹ್ವಾನಿಸಿದ್ದು ಅದರ ಮೊದಲೇ ಯಾವ ನಿಯಮಾವಳಿಗಳ ಪ್ರಕಾರ ಏಕ ಹಾಗೂ ಬಹು ನಿವೇಶನ ಬಡಾವಣೆ ನಕ್ಷೆ ಅನುಮೋದನೆ ನೀಡಲಾಗುತ್ತಿದೆ; | 1. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕೈಪಿಡಿ ಸಂಖ್ಯೆ: ಗ್ರಾಅಪ 86 ಅಗ್ರಾಪಂ 2014, ದಿನಾಂಕ:11.11.2014.<br>2. ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 292 ಮೈಅಪ್ರಾ 2024, ದಿನಾಂಕ:07.08.2024.<br>3. ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ 93 ಎಂಡಬ್ಲ್ಯೂಪಿ 2023 (ಭಾ-1), ದಿನಾಂಕ: 28.08.2024.<br>4. ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 334 ಮೈಅಪ್ರಾ 2024(ಇ), ದಿನಾಂಕ:13.09.2024 ಹಾಗೂ ಕಾಲಕಾಲಕ್ಕೆ ಸರ್ಕಾರವು ಹೊರಡಿಸುವ ಸುತ್ತೋಲೆಗಳನ್ವಯ ಕ್ರಮವಹಿಸಲಾಗುತ್ತಿದೆ. |
| (ಆ) | ಬಡಾವಣೆ ನಕ್ಷೆ ಅನುಮೋದನೆ ಕುರಿತು ಇಲಾಖೆ ಪ್ರಕಟಿಸಿದ ಕರಡು ನಿಯಮಗಳು ಕರಾವಳಿ ಮತ್ತು ಮಲೆನಾಡು ಭಾಗಗಳಲ್ಲಿರುವ ತುಂಡು ಭೂಮಿ ಮತ್ತು ಹರಡಿಕೊಂಡಿರುವ ಜನವಸತಿ ಪ್ರದೇಶಗಳಿಗೆ ಆಗುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಸಂಬಂಧಪಟ್ಟ ಇಲಾಖೆಗಳಾದ ಕಂದಾಯ, ಲೋಕೋಪಯೋಗಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಗ್ರಾಮ ಪಂಚಾಯಿತಿ ಇತ್ಯಾದಿಗಳ ನಡುವೆ ಸಮನ್ವಯ ಸಾಧಿಸಲು ಜಂಟಿ ಸಮಾಲೋಚನೆ ಸಭೆ ನಡೆಸಲು ಯಾವಾಗ ಕ್ರಮವಹಿಸಲಾಗುವುದು; | ಕರಾವಳಿ ಮತ್ತು ಮಲೆನಾಡು ಒಳಗೊಂಡಂತೆ ರಾಜ್ಯಾದ್ಯಂತ ಸ್ಥಳೀಯ ಯೋಜನಾ ಪ್ರದೇಶ ವ್ಯಾಪ್ತಿಯ ಹೊರಭಾಗದಲ್ಲಿ ಬಡಾವಣೆ ನಕ್ಷೆ ಅನುಮೋದನೆಗೆ ಸಂಬಂಧಿಸಿದಂತೆ ಮಾನದಂಡಗಳನ್ನು ಪ್ರಸ್ತಾಪಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4-ಕೆ ರ ಕರಡು ನಿಯಮಾವಳಿಯನ್ನು ದಿನಾಂಕ:14.02.2025 ರಂದು ಸಲಹೆ/ ಆಕ್ಷೇಪಣೆಗಳನ್ನು ಕೋರಿ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ. ನಿಗಧಿತ ಅವಧಿಯಲ್ಲಿ ಸ್ವೀಕೃತವಾಗುವ ಸಲಹೆ/ ಆಕ್ಷೇಪಣೆಗಳನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮವಹಿಸಲಾಗುವುದು. |
| (ಇ) | ಉಭಯ ಜಿಲ್ಲೆಗಳಲ್ಲಿ ಇಲ್ಲಿಯವರೆಗೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಎಷ್ಟು ಏಕ ಹಾಗೂ ಬಹು ನಿವೇಶನ ಬಡಾವಣೆ ನಕ್ಷೆ ಅನುಮೋದನೆ ನೀಡಿದೆ; ಎಷ್ಟು ಕಡತಗಳನ್ನು ಯಾವ್ಯಾವ ಕಾರಣಗಳಿಗಾಗಿ ತಿರಸ್ಕರಿಸಿದೆ ಮತ್ತು ಹಿಂತಿರುಗಿಸಿದೆ; ರಸ್ತೆ ಅಗಲೀಕರಣ, ಸಾರ್ವಜನಿಕ ರಸ್ತೆ ಮತ್ತು ರಸ್ತೆ ಜಾಗಗಳ ಸಮಸ್ಯೆಗಳ ಕಾರಣ ಹೆಚ್ಚಿನ ನಿವೇಶನ ಬಡಾವಣೆ ನಕ್ಷೆ ತಿರಸ್ಕಾರವಾಗುತ್ತಿರುವ ಬಗ್ಗೆ, | 1. ಕರಾವಳಿ ಜಿಲ್ಲೆಗಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಅನುಮೋದನೆ ನೀಡಿರುವ ಏಕ ಮತ್ತು ಬಹು ನಿವೇಶನ ಬಡಾವಣೆ ವಿನ್ಯಾಸ ನಕ್ಷೆಯ ಮಾಹಿತಿಯನ್ನು **ಅನುಬಂಧ-1** ರಲ್ಲಿರಿಸಿದೆ.<br>2. ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ 334 ಮೈಅಪ್ರಾ 2024(ಇ), ದಿನಾಂಕ:13.09.2024 ರಲ್ಲಿ ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ ಹಾಗೂ ಮಡಿಕೇರಿ ಜಿಲ್ಲೆಗಳಲ್ಲಿ ಸ್ಥಳೀಯ ಯೋಜನಾ |

| | | |
|---|---|---|
| | ಸಮಸ್ಯೆ ಸರಿಪಡಿಸಲು ಸರಕಾರ ಏನು ಕ್ರಮವಹಿಸಿದೆ; | ಪ್ರದೇಶದ ವ್ಯಾಪ್ತಿಯಲ್ಲಿ ಒಳಪಡದೇ ಇರುವ ಪ್ರದೇಶದಲ್ಲಿ 25 ಸೆಂಟ್ಸ್ ವಿಸ್ತೀರ್ಣದವರೆಗಿನ ಜಮೀನುಗಳಲ್ಲಿ ವಿನ್ಯಾಸ ಅನುಮೋದನೆ ನೀಡುವ ಸಂದರ್ಭದಲ್ಲಿ ಪ್ರಸ್ತಾವಿತ ಜಮೀನಿಗೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ವಿಸ್ತರಿಸಲು ಸಾಧ್ಯವಿಲ್ಲದೇ ಇದ್ದಲ್ಲಿ ಕನಿಷ್ಠ ರಸ್ತೆ ಅಗಲವನ್ನು 3.65 ಮೀ.(12ಅಡಿ) ಎಂದು ಪರಿಗಣಿಸಬಹುದಾಗಿದೆ ಎಂದು ಸುತ್ತೋಲೆ ಹೊರಡಿಸಲಾಗಿರುತ್ತದೆ(**ಅನುಬಂಧ-2**).<br>3. ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ 292 2024, ದಿನಾಂಕ: 07-08-2024 ರಲ್ಲಿ ಕರಾವಳಿ ಭಾಗದಲ್ಲಿ ವಸತಿ ಮತ್ತು ವಾಣಿಜ್ಯ ಭೂ ಪರಿವರ್ತಿತ ಜಮೀನುಗಳ ಏಕನಿವೇಶನ ವಿನ್ಯಾಸಗಳಲ್ಲಿ ಕಟ್ಟಡ ನಿರ್ಮಿಸಲು ಸಾರ್ವಜನಿಕ ರಸ್ತೆ ಸಂಪರ್ಕವನ್ನು ಕಡ್ಡಾಯಗೊಳಿಸಿರುವುದರಿಂದ ಉಂಟಾಗುವ ಸಮಸ್ಯೆಗಳ ಬಗ್ಗೆ, ಪರಿಶೀಲಿಸಿ ರಾಜ್ಯಾದ್ಯಂತ ಏಕರೂಪ ಕ್ರಮ ಜರುಗಿಸುವ ಸಂಬಂಧ ಈ ಕೆಳಕಂಡಂತೆ ನಿರ್ದೇಶನ ನೀಡಲಾಗಿರುತ್ತದೆ:-<br>• ಸ್ವಂತ ಉಪಯೋಗದ Farm House/ ಕಟ್ಟಡಗಳಿಗೆ ಕೆಲವೊಂದು ಅನುಮೋದನೆ ನೀಡುವ ನಿರ್ದಿಷ್ಟವಾದ ಪ್ರಕರಣಗಳಲ್ಲಿ ಪ್ರಶ್ನಿತ ಜಮೀನಿಗೆ ಸಂಪರ್ಕ ಕಲ್ಪಿಸುವ ಸಾರ್ವಜನಿಕ ರಸ್ತೆಗೆ ಲಗತ್ತಾಗಿರುವ ಜಮೀನಿಗೆ ಒಳಪಡದೇ ಇರುವ ಭಾಗಶ: ಜಮೀನಿನಲ್ಲಿ ಕಟ್ಟಡ ನಿರ್ಮಿಸಿದಲ್ಲಿ ಭೂ-ಮಾಲೀಕರ ಮಾಲೀಕತ್ವದಲ್ಲಿರುವ ಜಮೀನಿನಿಂದ ಸಂಪರ್ಕ ಲಭ್ಯವಾಗುವುದರಿಂದ ಇಂತಹ ಪ್ರಸ್ತಾವನೆಗಳಿಗೆ ರಸ್ತೆಯ ಸಂಪರ್ಕ ಕಲ್ಪಿಸಲು ಪರಿತ್ಯಾಜನಾ ಪತ್ರ (relinquishment deed) ಮುಖಾಂತರ ರಸ್ತೆಯ ಜಾಗೆಯನ್ನು ಹಸ್ತಾಂತರಿಸಿಕೊಳ್ಳುವ ಅವಶ್ಯಕತೆ ಇರುವುದಿಲ್ಲ.<br>ಆದರೆ ಸದರಿ ಜಮೀನನ್ನು ವಿಭಜಿಸಿ ಬಹುನಿವೇಶನಗಳನ್ನು ರಚಿಸಿದಲ್ಲಿ ರಸ್ತೆ ಜಾಗವನ್ನು ಪರಿತ್ಯಾಜನಾ ಪತ್ರದ (relinquishment deed) ಹಸ್ತಾಂತರಿಸಿ ಕೊಳ್ಳಬೇಕಾಗಿರುತ್ತದೆ. ಹಾಗಾಗಿ ಸ್ವಂತ ಉಪಯೋಗಕ್ಕೆ ಕಟ್ಟಡಗಳಿಗೆ ಅನುಮೋದನೆ ನೀಡುವ ಪ್ರಸ್ತಾವನೆಗಳಲ್ಲಿ ಅರ್ಜಿದಾರರಿಂದ ಸದರಿ ಜಮೀನನ್ನು ಭವಿಷ್ಯದಲ್ಲಿ ವಿಭಜಿಸಿದಲ್ಲಿ ಅಥವಾ ಭೂ ಪರಿವರ್ತಿತ ಜಮೀನನ್ನು ಬೇರೆ ಮಾಲೀಕತ್ವಕ್ಕೆ ವರ್ಗಾವಣೆ/ ಮಾರಾಟ |

| | | |
|---|---|---|
| | | ಮಾಡಿದಲ್ಲಿ ರಸ್ತೆ ಜಾಗೆಯನ್ನು ಪರಿತ್ಯಾಜನಾ ಪತ್ರ (relinquishment deed) ಮುಖಾಂತರ ಸಂಬಂಧಿಸಿದ ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸುವ ಕುರಿತು ಪ್ರಮಾಣ ಪತ್ರ ಪಡೆದು, ಪಶ್ನಿತ ಜಮೀನನ್ನು ಉಪ ವಿಭಜಿಸುವ / ಮಾರಾಟ ಮಾಡುವ ಸಂದರ್ಭದಲ್ಲಿ ರಸ್ತೆಯ ಜಾಗೆಯನ್ನು ಹಸ್ತಾಂತರಿಸುವ ಷರತ್ತನ್ನು ವಿನ್ಯಾಸ ಅನುಮೋದನೆ ಹಾಗೂ ಖಾತೆ ತೆರೆಯುವ ಸಮಯದಲ್ಲಿ ವಿಧಿಸಿ ಅನುಮೋದನೆ ನೀಡತಕ್ಕದ್ದು" ಎಂದು ಸುತ್ತೋಲೆ ಹೊರಡಿಸಲಾಗಿರುತ್ತದೆ(**ಅನುಬಂಧ-3**). |
| (ಈ) | ನಿವೇಶನ ಬಡಾವಣೆ ನಕ್ಷೆ ಅನುಮೋದಿಸುವ ನಗರ ಮತ್ತು ಯೋಜನಾ ಇಲಾಖೆಗೆ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಟ್ಟಡ ಪ್ರಾರಂಭಿಕ ಪ್ರಮಾಣ ಪತ್ರ ನೀಡದೇ ಇರಲು ಕಾರಣವೇನು; ಈ ಕುರಿತ ನಿಯಮಗಳು ಯಾವುವು; ಕಟ್ಟಡ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಇಲಾಖೆ ಯಾವುದು ಮತ್ತು ಪ್ರಕ್ರಿಯೆಯ (Proceedure) ವಿವರಗಳೇನು? | ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 4ಎ ರಂತೆ ಸ್ಥಳೀಯ ಯೋಜನಾ ವ್ಯಾಪ್ತಿಯಲ್ಲಿನ ಪ್ರದೇಶ ಸ್ಥಳೀಯ ಘೋಷಣೆಯಾದ ಸಂಸ್ಥೆಗಳಿಂದ ಸ್ವೀಕೃತವಾಗುವ ಕಟ್ಟಡ ಪರವಾನಿಗೆ ಪ್ರಕರಣಗಳಿಗೆ ಪ್ರಾರಂಭಿಕ ಪ್ರಮಾಣ ಪತ್ರಗಳನ್ನು ಸಂಬಂಧಿಸಿದ ಪ್ರಾಧಿಕಾರಗಳಿಂದ ನೀಡಲಾಗುತ್ತಿದೆ.<br><br>ಆದರೆ, ಸ್ಥಳೀಯ ಯೋಜನಾ ಪ್ರದೇಶದ ಹೊರ ಭಾಗದಲ್ಲಿನ ಪ್ರದೇಶದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4(ಕೆ) ರಡಿಯಲ್ಲಿ ಸ್ಥಳೀಯ ಸಂಸ್ಥೆಯು ಭೂಮಿಯ ಅಭಿವೃದ್ಧಿಗೆ ಅನುಮೋದನೆ ನೀಡುವ ಪೂರ್ವದಲ್ಲಿ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಅಥವಾ ಅಧಿಕರಿಸಿದ ಅಧಿಕಾರಿಯವರಿಂದ ಅನುಮೋದನೆ ಪಡೆಯಬೇಕಾಗಿರುತ್ತದೆ. ಸದರಿ ಕಾಯ್ದೆಗೆ ಕಟ್ಟಡ ನಿಯಮಾವಳಿಗಳನ್ನು ಒಳಗೊಂಡಂತೆ ಕರಡು ನಿಯಮಗಳನ್ನು ಹೊರಡಿಸಲಾಗಿರುತ್ತದೆ.<br><br>ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಮಿತಿಯಲ್ಲಿ ಕಟ್ಟಡ ಪರವಾನಿಗೆ ನೀಡುವ ಅಧಿಕಾರವು ಗ್ರಾಮೀಣ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೆ ಬರುತ್ತದೆ. |

ಕಡತ ಸಂಖ್ಯೆ: ನಅಇ 88 ಮೈಅಪ್ರಾ 2025

**(ಬಿ.ಎಸ್.ಸುರೇಶ)**

ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು.

## ಅನುಬಂಧ-1

**ಕರಾವಳಿ ಜಿಲ್ಲೆಗಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಅನುಮೋದನೆ ನೀಡಿರುವ ಏಕ ಮತ್ತು ಬಹು ನಿವೇಶನ ಬಡಾವಣೆ ವಿನ್ಯಾಸ ನಕ್ಷೆಗಳ ಮಾಹಿತಿ.**

| ಕ್ರ. ಸಂ. | ಜಿಲ್ಲೆ | ಕಛೇರಿ | ಏಕ ನಿವೇಶನ ಪ್ರಕರಣಗಳ ಸಂಖ್ಯೆ | ಬಹು ನಿವೇಶನ ಪ್ರಕರಣಗಳ ಸಂಖ್ಯೆ | ತಿರಸ್ಕರಿಸಿರುವ ಪ್ರಕರಣಗಳ ಸಂಖ್ಯೆ | ಷರಾ |
|---|---|---|---|---|---|---|
| 1 | ದಕ್ಷಿಣ ಕನ್ನಡ | ಸಹಾಯಕ ನಿರ್ದೇಶಕರು, ಮಂಗಳೂರು. | 189 | 01 | 91 | ಭೂ ಪರಿವರ್ತನೆಗೊಂಡು ಅನಧಿಕೃತವಾಗಿ ವಿಭಜಿಸಿದ ಜಮೀನು, ತುಂಡು ಭೂಮಿ ಭೂ ಪರಿವರ್ತಿಸಿ ವಿನ್ಯಾಸ ನಕ್ಷೆ ಅನುಮೋದನೆ, ರಸ್ತೆ ಅಗಲೀಕರಣಕ್ಕೆ ಸೂಕ್ತ ಸ್ಥಳಾವಕಾಶ ಲಭ್ಯವಿರದ ಕಾರಣ ಒಟ್ಟು 91 ಏಕ ನಿವೇಶನ ವಿನ್ಯಾಸ ನಕ್ಷೆ ಕಡತಗಳನ್ನು ತಿರಸ್ಕರಿಸಲಾಗಿದೆ. |
| 2 | ದಕ್ಷಿಣ ಕನ್ನಡ | ಪುತ್ತೂರು ಯೋಜನಾ ಪ್ರಾಧಿಕಾರ. | ಪುತ್ತೂರು ತಾಲ್ಲೂಕು -370<br>ಸುಳ್ಯ ತಾಲ್ಲೂಕು -150<br>ಕಡಬ ತಾಲ್ಲೂಕು -175 | 0 | ಪುತ್ತೂರು ತಾಲ್ಲೂಕು -33<br>ಸುಳ್ಯ ತಾಲ್ಲೂಕು -64<br>ಕಡಬ ತಾಲ್ಲೂಕು -32 | ನಿವೇಶನವನ್ನು ಅನಧಿಕೃತವಾಗಿ ವಿಭಜನೆ ಮಾಡಿರುವುದರಿಂದ, ಒಳಪಟ್ಟಿರುವುದರಿಂದ, ರಸ್ತೆ ಮಾರ್ಜಿನ್‌ಗೆ ಒಳಪಟ್ಟಿರುವುದರಿಂದ, ನಿವೇಶನದಲ್ಲಿ ಕಟ್ಟಡ ಇರುವುದರಿಂದ ತುಂಡು ಭೂಮಿ ಭೂ ಪರಿವರ್ತಿಸಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿರುವುದರಿಂದ ಕಡತಗಳನ್ನು ತಿರಸ್ಕರಿಸಲಾಗಿದೆ. |
| 3 | ದಕ್ಷಿಣ ಕನ್ನಡ | ಬಂಟ್ವಾಳ ಯೋಜನಾ ಪ್ರಾಧಿಕಾರ. | 1051 | 0 | 111 | ಬಂಟ್ವಾಳ ತಾಲೂಕು:<br>111 ಪ್ರಕರಣಗಳನ್ನು ಭೂ ಪರಿವರ್ತನೆಯಾದ ಒಟ್ಟು ವಿಸ್ತೀರ್ಣದ ಜಾಗಕ್ಕೆ ವಿನ್ಯಾಸ ಅನುಮೋದನೆ ಪಡೆಯದೇ ಜಮೀನನ್ನು ಪರಬಾರೆ ಮಾಡಿರುವ ನಿವೇಶನಗಳನ್ನುಹಾಗೂ ಈಗಾಗಲೇ ಕಟ್ಟಡ ನಿರ್ಮಿಸಿ ಗ್ರಾಮ ಪಂಚಾಯತ್‌ಯಿಂದ ಮತ್ತು 11 ಬಿ ನೀಡಿರುವ ಪ್ರಕರಣಗಳನ್ನು ವಿನ್ಯಾಸ ಅನುಮೋದನೆ ಅರ್ಜಿಯನ್ನು ತಿರಸ್ಕರಿಸಲಾಗಿದೆ.<br><br>140 ಪ್ರಕರಣಗಳಿಗೆ ದಾಖಲೆಗಳನ್ನು ಕೋರಿ ಹಾಗೂ ಶುಲ್ಕ ಪಾವತಿ ಕೋರಿ ಹಿಂಬರಹ ನೀಡಲಾಗಿರುತ್ತದೆ. |

| | | | | | | |
|---|---|---|---|---|---|---|
| 4 | ದಕ್ಷಿಣ ಕನ್ನಡ | ಮೂಡಬಿದ್ರೆ ಯೋಜನಾ ಪ್ರಾಧಿಕಾರ. | ಮೂಡಬಿದ್ರೆ ತಾಲ್ಲೂಕು-110<br>ಬೆಳ್ತಂಗಡಿ ತಾಲ್ಲೂಕು-228 | 0 | ಮೂಡಬಿದ್ರೆ ತಾಲ್ಲೂಕು-53<br>ಬೆಳ್ತಂಗಡಿ ತಾಲ್ಲೂಕು-169 | ಭೂ ಪರಿವರ್ತನೆಯಾದ ಒಟ್ಟು ವಿಸ್ತೀರ್ಣದ ಜಾಗಕ್ಕೆ ವಿನ್ಯಾಸ ಅನುಮೋದನೆ ಪಡೆಯದೇ ಜಮೀನನ್ನು ಪರಬಾರೆ ಮಾಡಿರುವುದರಿಂದ, 2013 ರ ಪೂರ್ವದಲ್ಲಿ ಪಂಚಾಯತಿಯಿಂದ ಪರವಾನಿಗೆ ಪಡೆದು ಕಟ್ಟಡ ನಿರ್ಮಿಸಿರುವ ಕಡತಗಳನ್ನು, ರಸ್ತೆಯ ಕಟ್ಟಡ ರೇಖೆ ವ್ಯಾಪ್ತಿಯ ಒಳಗೆ ಬರುವ ಕಡತಗಳನ್ನು, ತುಂಡು ಭೂಮಿ ಭೂ ಪರಿವರ್ತಿಸಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿರುವ ಕಡತಗಳನ್ನು ತಿರಸ್ಕರಿಸಿದೆ. |
| 5 | ಉಡುಪಿ | ಸಹಾಯಕ ನಿರ್ದೇಶಕರು, ಉಡುಪಿ. | 449 | 03 | 11 | 1. 11 ಪ್ರಕರಣಗಳನ್ನು ಭೂ ಪರಿವರ್ತಿತ ಪ್ರದೇಶದಲ್ಲಿ ಅನಧಿಕೃತವಾಗಿ ವಿಭಜಿಸಿತ ಪ್ರಸ್ತಾವನೆಗಳನ್ನು ಹಾಗೂ ಖಾಸಗಿ ರಸ್ತೆ ಸಂಪರ್ಕ ಮತ್ತು ರಸ್ತೆ ಸಂಪರ್ಕ ಇಲ್ಲದೇ ಇರುವ ಪ್ರಕರಣಗಳನ್ನು ತಿರಸ್ಕರಿಸಲಾಗಿದೆ.<br>2. 255 ಪ್ರಕರಣಗಳಿಗೆ ದಾಖಲೆ ಕೋರಿ ಹಿಂಬರಹ ನೀಡಲಾಗಿದೆ. |
| 6 | ಉಡುಪಿ | ಕುಂದಾಪುರ ಯೋಜನಾ ಪ್ರಾಧಿಕಾರ. | ಕುಂದಾಪುರ ತಾಲ್ಲೂಕು-258<br>ಬೈಂದೂರು ತಾಲ್ಲೂಕು-138 | 0 | ಕುಂದಾಪುರ ತಾಲ್ಲೂಕು-06<br>ಬೈಂದೂರು ತಾಲ್ಲೂಕು-03 | 1. 11 ಪ್ರಕರಣಗಳನ್ನು ಭೂ ಪರಿವರ್ತನೆಯಾದ ಒಟ್ಟು ವಿಸ್ತೀರ್ಣದ ಜಾಗಕ್ಕೆ ವಿನ್ಯಾಸ ಅನುಮೋದನೆ ಪಡೆಯದೇ ಜಮೀನನ್ನು ಪರಬಾರೆ ಮಾಡಿರುವ ನಿವೇಶನಗಳನ್ನು ಹಾಗೂ ಈಗಾಗಲೇ ಕಟ್ಟಡ ನಿರ್ಮಿಸಿ ಗ್ರಾಮ ಪಂಚಾಯತ್‌ಯಿಂದ ಮತ್ತು 11 ಬಿ ನೀಡಿರುವ ಪ್ರಕರಣಗಳನ್ನು ವಿನ್ಯಾಸ ಅನುಮೋದನೆ ಅರ್ಜಿಯನ್ನು ತಿರಸ್ಕರಿಸಲಾಗಿದೆ.<br>2. 266 ಪ್ರಕರಣಗಳಿಗೆ ದಾಖಲೆ ಕೋರಿ ಹಿಂಬರಹ ನೀಡಲಾಗಿದೆ.<br>3. 30 ಪ್ರಕರಣಗಳು ಬಾಕಿ ಇರುತ್ತವೆ. |
| 7 | ಉಡುಪಿ | ಕಾಪು ಯೋಜನಾ ಪ್ರಾಧಿಕಾರ. | ಕಾಪು ತಾಲ್ಲೂಕು-154<br>ಕಾರ್ಕಳ ತಾಲ್ಲೂಕು-127 | 0 | ಕಾಪು ತಾಲ್ಲೂಕು-21<br>ಕಾರ್ಕಳ ತಾಲ್ಲೂಕು-17 | 1. 38 ಪ್ರಕರಣಗಳನ್ನು ಭೂ ಪರಿವರ್ತನೆಯಾದ ಒಟ್ಟು ವಿಸ್ತೀರ್ಣದ ಜಾಗಕ್ಕೆ ವಿನ್ಯಾಸ ಅನುಮೋದನೆ ಪಡೆಯದೇ ಜಮೀನನ್ನು ಪರಬಾರೆ ಮಾಡಿರುವ ನಿವೇಶನಗಳನ್ನು ಹಾಗೂ ಈಗಾಗಲೇ ಕಟ್ಟಡ ನಿರ್ಮಿಸಿ ಗ್ರಾಮ ಪಂಚಾಯತ್‌ಯಿಂದ ಮತ್ತು 11 ಬಿ ನೀಡಿರುವ ಪ್ರಕರಣಗಳನ್ನು ವಿನ್ಯಾಸ ಅನುಮೋದನೆ |

| | | | | | | |
|---|---|---|---|---|---|---|
| | | | | | | ಅರ್ಜಿಯನ್ನು ತಿರಸ್ಕರಿಸಲಾಗಿದೆ.<br>2. 38 ಪ್ರಕರಣಗಳಿಗೆ ದಾಖಲೆ ಕೋರಿ ಹಿಂಬರಹ ನೀಡಲಾಗಿದೆ.<br>3. 85 ಪ್ರಕರಣಗಳು ಬಾಕಿ ಇರುತ್ತವೆ. |
| 8 | ಉತ್ತರ ಕನ್ನಡ | ಸಹಾಯಕ ನಿರ್ದೇಶಕರು, ಕಾರವಾರ. | 113 | 0 | 04 | 04 ಪ್ರಕರಣಗಳಲ್ಲಿ 03 ಪ್ರಕರಣಗಳಿಗೆ ಸಾರ್ವಜನಿಕ ರಸ್ತೆ ಸಂಪರ್ಕ ಇಲ್ಲದೇ ಇರುವುದರಿಂದ ತಿರಸ್ಕರಿಸಲಾಗಿದೆ. 38 ಪ್ರಕರಣಗಳಿಗೆ ವಿನ್ಯಾಸ ನಕ್ಷೆ ಅನುಮೋದನೆ ಅತ್ಯವಶ್ಯವಾಗಿರುವ ಪಿ.ಟಿ.ಶೀಟ್ ರಸ್ತೆ ಧೃಢೀಕರಣ ಹಾಗೂ ಸ್ಥಳ ಸೂಚಿ ನಕ್ಷೆ ಇಲ್ಲದೇ ಇರುವುದರಿಂದ ದಾಖಲೆಗಳನ್ನು ಸಲ್ಲಿಸುವವರೆಗೆ ವಿಲೇಗೆ ತರಲಾಗಿದೆ. |
| 9 | ಉತ್ತರ ಕನ್ನಡ | ಸಹಾಯಕ ನಿರ್ದೇಶಕರು, ಶಿರಸಿ. | 05 | 12 | 21 | ಅಗತ್ಯ ದಾಖಲೆಗಳನ್ನು ಸಲ್ಲಿಸದ ಕಾರಣ ವಿಲೇಪಡಿಸಲಾಗಿದೆ |
| 10 | ಉತ್ತರ ಕನ್ನಡ | ಶಿರಸಿ ಯೋಜನಾ ಪ್ರಾಧಿಕಾರ | 10 | 0 | 11 | 1. 11 ಪ್ರಕರಣಗಳನ್ನು ಭೂ ಪರಿವರ್ತಿತ ಕ್ಷೇತ್ರದಲ್ಲಿ ಅನಧಿಕೃತವಾಗಿ ವಿಭಜನೆಯಾಗಿರುವುದರಿಂದ ತಿರಸ್ಕರಿಸಲಾಗಿದೆ.<br>2. 12 ಪ್ರಕರಣಗಳಿಗೆ ಅಗತ್ಯ ಮಾಹಿತಿ /ದಾಖಲೆಗಳನ್ನು ಸಲ್ಲಿಸದ ಕಾರಣ ಪ್ರಕರಣವನ್ನು ವಿಲೇಪಡಿಸಲಾಗಿದೆ.<br>3. 06 ಪ್ರಕರಣಗಳಿಗೆ ಅಗತ್ಯ ದಾಖಲೆ ಕೋರಿ ಪತ್ರ ಬರೆಯಲಾಗಿದೆ. |
| | | **ಒಟ್ಟು** | **3527** | **16** | **647** | |

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ

ಅನುಬಂಧ-2

# ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 334 ಮೈಅಪ್ರಾ 2024(ಇ)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ, 4ನೇ ಮಹಡಿ,
ಬೆಂಗಳೂರು, ದಿನಾಂಕ:13.09.2024

## ಸುತ್ತೋಲೆ

**ವಿಷಯ:-** ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ ಹಾಗೂ ಮಡಿಕೇರಿ ಜಿಲ್ಲೆಗಳಲ್ಲಿ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಒಳಪಡದೇ ಇರುವ ಪ್ರದೇಶದಲ್ಲಿ 25 ಸೆಂಟ್ಸ್ ವಿಸ್ತೀರ್ಣದ ವರೆಗಿನ ಜಮೀನುಗಳಲ್ಲಿ ವಿನ್ಯಾಸ ಅನುಮೋದನೆ ಪರಿಗಣಿಸಬೇಕಾದ ಸಂಪರ್ಕ ರಸ್ತೆ ಅಗಲದ ಕುರಿತು.

****

ಕರಾವಳಿ ಪ್ರದೇಶಗಳ ಭೌಗೋಳಿಕ ಲಕ್ಷಣಗಳಿಂದಾಗಿ ಹಲವಾರು ಸಂಧರ್ಭಗಳಲ್ಲಿ ರಸ್ತೆಗಳ ಅಗಲವನ್ನು ವಿಸ್ತರಿಸಲು ಸಾಧ್ಯವಾಗುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಸಕ್ಷಮ ಪ್ರಾಧಿಕಾರಗಳಿಂದ ವಿನ್ಯಾಸ ಅನುಮೋದನೆ ಸಮಯದಲ್ಲಿ ಹಾಲಿ ರಸ್ತೆಗಳನ್ನು 9.0ಮೀ ಅಗಲಕ್ಕೆ ವಿಸ್ತರಿಸಲು ಪ್ರಸ್ತಾಪಿಸಲಾಗುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಅಂಶವನ್ನು ಸರ್ಕಾರವು ಗಮನಿಸಿದೆ.

ಆದ್ದರಿಂದ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ ಹಾಗೂ ಮಡಿಕೇರಿ ಜಿಲ್ಲೆಗಳಲ್ಲಿ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಒಳಪಡದೇ ಇರುವ ಪ್ರದೇಶದಲ್ಲಿ 25 ಸೆಂಟ್ಸ್ ವಿಸ್ತೀರ್ಣದ ವರೆಗಿನ ಜಮೀನುಗಳಲ್ಲಿ ವಿನ್ಯಾಸ ಅನುಮೋದನೆ ನೀಡುವ ಸಂಧರ್ಭದಲ್ಲಿ ಪ್ರಸ್ತಾವಿತ ಜಮೀನಿಗೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ವಿಸ್ತರಿಸಲು ಸಾಧ್ಯವಿಲ್ಲದೇ ಇದ್ದಲ್ಲಿ ಕನಿಷ್ಠ ರಸ್ತೆ ಅಗಲವನ್ನು 3.65ಮೀ (12ಅಡಿ) ಎಂದು ಪರಿಗಣಿಸಬಹುದಾಗಿದೆ.

ಇಂತಹ ರಸ್ತೆಗಳಿಗೆ ಹೊಂದಿಕೊಂಡು G+1 ಸ್ವಂತ ಉಪಯೋಗದ ವಸತಿ ಕಟ್ಟಡಕ್ಕೆ/ ಫಾರ್ಮ್ ಹೌಸ್ ಕಟ್ಟಡಗಳಿಗೆ ಮಾತ್ರ ಅನುಮೋದನೆ ನೀಡತಕ್ಕದ್ದು.

(ಲತಾ.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ.

ಪ್ರತಿಯನ್ನು:

1. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಜಿಲ್ಲಾಧಿಕಾರಿಗಳು, ಉತ್ತರಕನ್ನಡ/ದಕ್ಷಿಣ ಕನ್ನಡ/ಉಡುಪಿ/ಮಡಿಕೇರಿ ಜಿಲ್ಲೆಗಳು.

3. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ಕೇಂದ್ರ ಕಚೇರಿ, ಬೆಂಗಳೂರು.
4. ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು, ವಲಯ ಕಚೇರಿ ಧಾರವಾಡ.
5. ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ವಿಭಾಗೀಯ ಕಚೇರಿ, ಬೆಂಗಳೂರು, ಮೈಸೂರು, ಕಲಬುರಗಿ.
6. ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಮತ್ತು ಮಡಿಕೇರಿ ಜಿಲ್ಲೆ.
7. ನಗರ ಯೋಜಕ ಸದಸ್ಯರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಮತ್ತು ಮಡಿಕೇರಿ ಜಿಲ್ಲೆಯ ನಗರಾಭಿವೃದ್ಧಿ / ಯೋಜನಾ ಪ್ರಾಧಿಕಾರಗಳು, ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖಾಂತರ.
8. ಶಾಖಾ ರಕ್ಷಾ ಕಡತ ಮತ್ತು ಹೆಚ್ಚುವರಿ ಪ್ರತಿಗಳು.

ಅನುಬಂಧ - 3

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 292 ಮೈಅಪ್ರಾ 2024

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:07.08.2024

## ಸುತ್ತೋಲೆ

**ವಿಷಯ:-** ವಸತಿ ಮತ್ತು ವಸತಿಯೇತರ ಭೂ ಪರಿವರ್ತಿತ ಜಮೀನುಗಳ ಏಕನಿವೇಶನ ವಿನ್ಯಾಸಗಳಿಗೆ ಅನುಮೋದನೆ ನೀಡುವ ಕುರಿತು.

********

ದಿನಾಂಕ:25.07.2024 ರಂದು ಕರಾವಳಿ ಭಾಗದಲ್ಲಿ ವಸತಿ ಮತ್ತು ವಾಣಿಜ್ಯ ಭೂ ಪರಿವರ್ತಿತ ಜಮೀನುಗಳ ಏಕನಿವೇಶನ ವಿನ್ಯಾಸಗಳಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಚರ್ಚಿಸಲಾಗಿ Farm House/ಭೂ ಪರಿವರ್ತಿತ ಜಮೀನಿನಲ್ಲಿ ಏಕನಿವೇಶನ ವಿನ್ಯಾಸಗಳಲ್ಲಿ ಕಟ್ಟಡ ನಿರ್ಮಿಸಲು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ಸಾರ್ವಜನಿಕ ರಸ್ತೆಯ ಸಂಪರ್ಕವನ್ನು ಕಡ್ಡಾಯಗೊಳಿಸಲಾಗುತ್ತಿರುವುದರಿಂದ ಉಂಟಾಗುತ್ತಿರುವ ಸಮಸ್ಯೆಗಳ ಬಗ್ಗೆ ಪರಿಶೀಲಿಸಲಾಗಿರುತ್ತದೆ. ಇಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ, ಸಕ್ಷಮಪ್ರಾಧಿಕಾರಗಳು ನಿಯಮಾನುಸಾರ ಕ್ರಮ ಜರುಗಿಸಿ ತಾಂತ್ರಿಕ ಅನುಮೋದನೆಗಳನ್ನು ನೀಡಲು ಸರ್ಕಾರದಿಂದ ಸ್ಪಷ್ಟ ನಿರ್ದೇಶನವನ್ನು ನೀಡುವ ಅಗತ್ಯವಿರುವುದನ್ನು ಗಮನಿಸಲಾಗಿರುತ್ತದೆ. ಹಾಗಾಗಿ, ರಾಜ್ಯಾದ್ಯಂತ ಏಕರೂಪದ ಕ್ರಮ ಜರುಗಿಸುವ ಅಗತ್ಯವಿದ್ದು, ವಸತಿ ಮತ್ತು ವಸತಿಯೇತರ ಭೂ ಪರಿವರ್ತಿತ ಜಮೀನುಗಳಲ್ಲಿ ಏಕನಿವೇಶನ ವಿನ್ಯಾಸಗಳಿಗೆ ಅನುಮೋದನೆ ನೀಡುವ ಸಂದರ್ಭದಲ್ಲಿ ಹಾಗೂ farm house ಗಳಿಗೆ ಅನುಮತಿ ನೀಡುವ ಪ್ರಸ್ತಾವನೆಗಳಲ್ಲಿ ಸಾರ್ವಜನಿಕ ರಸ್ತೆಯ ಸಂಪರ್ಕದ ಕುರಿತು ಕೆಳಕಂಡಂತೆ ಪರಿಶೀಲಿಸಿ ತಾಂತ್ರಿಕ ಅನುಮೋದನೆ ನೀಡಲು ನಿರ್ದೇಶಿಸಲಾಗಿದೆ.

"ಸ್ವಂತ ಉಪಯೋಗದ Farm House/ ಕಟ್ಟಡಗಳಿಗೆ ಅನುಮೋದನೆ ನೀಡುವ ಕೆಲವೊಂದು ನಿರ್ದಿಷ್ಟವಾದ ಪ್ರಕರಣಗಳಲ್ಲಿ ಪ್ರಶ್ನಿತ ಜಮೀನಿಗೆ ಸಂಪರ್ಕ ಕಲ್ಪಿಸುವ ಸಾರ್ವಜನಿಕ ರಸ್ತೆಗೆ ಲಗತ್ತಾಗಿರುವ ಜಮೀನಿಗೆ ಒಳಪಡದೇ ಇರುವ ಭಾಗಶ: ಜಮೀನಿನಲ್ಲಿ ಕಟ್ಟಡ ನಿರ್ಮಿಸಿದಲ್ಲಿ ಭೂ-ಮಾಲೀಕರ ಮಾಲೀಕತ್ವದಲ್ಲಿರುವ ಜಮೀನಿನಿಂದ ಸಂಪರ್ಕ ಲಭ್ಯವಾಗುವುದರಿಂದ ಇಂತಹ ಪ್ರಸ್ತಾವನೆಗಳಿಗೆ ರಸ್ತೆಯ ಸಂಪರ್ಕ ಕಲ್ಪಿಸಲು ಪರಿತ್ಯಾಜನಾ ಪತ್ರ (relinquishment deed) ಮುಖಾಂತರ ರಸ್ತೆಯ ಜಾಗೆಯನ್ನು ಹಸ್ತಾಂತರಿಸಿಕೊಳ್ಳುವ ಅವಶ್ಯಕತೆ ಇರುವುದಿಲ್ಲ. ಆದರೆ ಸದರಿ ಜಮೀನನ್ನು ವಿಭಜಿಸಿ ಬಹುನಿವೇಶನಗಳನ್ನು ರಚಿಸಿದಲ್ಲಿ, ರಸ್ತೆ ಜಾಗವನ್ನು ಪರಿತ್ಯಾಜನಾ ಪತ್ರ (relinquishment deed) ಮುಖಾಂತರ ಹಸ್ತಾಂತರಿಸಿಕೊಳ್ಳಬೇಕಾಗಿರುತ್ತದೆ. ಹಾಗಾಗಿ ಸ್ವಂತ ಉಪಯೋಗಕ್ಕೆ ಕಟ್ಟಡಗಳಿಗೆ ಅನುಮೋದನೆ ನೀಡುವ ಪ್ರಸ್ತಾವನೆಗಳಲ್ಲಿ ಅರ್ಜಿದಾರರಿಂದ ಸದರಿ ಜಮೀನನ್ನು ಭವಿಷ್ಯದಲ್ಲಿ ವಿಭಜಿಸಿದಲ್ಲಿ ಅಥವಾ ಭೂ ಪರಿವರ್ತಿತ ಜಮೀನನ್ನು

ದಿನಾಂಕ 12/8/2024 ಜಾರಿ

ಬೇರೆ ಮಾಲೀಕತ್ವಕ್ಕೆ ವರ್ಗಾವಣೆ/ಮಾರಾಟ ಮಾಡಿದಲ್ಲಿ ರಸ್ತೆ ಜಾಗೆಯನ್ನು ಪರಿತ್ಯಾಜನಾ ಪತ್ರ (relinquishment deed) ಮುಖಾಂತರ ಸಂಬಂಧಿಸಿದ ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸುವ ಕುರಿತು ಪ್ರಮಾಣ ಪತ್ರ ಪಡೆದು, ಪ್ರಶ್ನಿತ ಜಮೀನನ್ನು ಉಪ ವಿಭಜಿಸುವ/ ಮಾರಾಟ ಮಾಡುವ ಸಂದರ್ಭದಲ್ಲಿ ರಸ್ತೆಯ ಜಾಗೆಯನ್ನು ಹಸ್ತಾಂತರಿಸುವ ಷರತ್ತನ್ನು ವಿನ್ಯಾಸ ಅನುಮೋದನೆ ಹಾಗೂ ಖಾತೆ ತೆರೆಯುವ ಸಮಯದಲ್ಲಿ ವಿಧಿಸಿ ಅನುಮೋದನೆ ನೀಡತಕ್ಕದ್ದು".

(ಲತಾ.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ & ನಯೋಸೇ)
ನಗರಾಭಿವೃದ್ಧಿ ಇಲಾಖೆ.
7-8-24

ಪ್ರತಿಯನ್ನು:

1. ಅಪರ ಮುಖ್ಯಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು, ಮತ್ತು ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ.
3. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ಕೇಂದ್ರ ಕಚೇರಿ, ಬೆಂಗಳೂರು.
4. ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು, ವಲಯ ಕಚೇರಿ ಧಾರವಾಡ.
5. ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ವಿಭಾಗೀಯ ಕಚೇರಿ, ಬೆಂಗಳೂರು, ಮೈಸೂರು, ಕಲಬುರಗಿ.
6. ರಾಜ್ಯದ ಎಲ್ಲಾ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖಾಂತರ.
7. ನಗರ ಯೋಜಕ ಸದಸ್ಯರು ಹಾಗೂ ಸದಸ್ಯ ಕಾರ್ಯದರ್ಶಿಗಳು, ರಾಜ್ಯದ ಎಲ್ಲಾ ನಗರಾಭಿವೃದ್ಧಿ / ಯೋಜನಾ ಪ್ರಾಧಿಕಾರಗಳು, ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖಾಂತರ.
8. ಹೆಚ್ಚುವರಿ ಪ್ರತಿ/ಶಾಖಾ ರಕ್ಷಾ ಕಡತ ಪ್ರತಿ.